ಮೈಸೂರು ಅರಮನೆ ಆವರಣದ ಆನೆ ಬಿಡಾರದ ನೀರಿನ ತೊಟ್ಟಿಯಲ್ಲಿ ಸುಗ್ರೀವ ಆನೆಗೆ ಜಳಕ ಮಾಡಿಸುತ್ತಿರುವ ಮಾವುತ ಶಂಕರ.

ಚಿನ್ನದ ಅಂಬಾರಿ ಹೊರಲು ಪ್ರಶಾಂತ ಕೊಡುವನು ಹೆಗಲು

ಮೊದಲ ಬಾರಿಗೆ ಪ್ರಶಾಂತ ಆನೆ ಮೇಲೆ ಅಂಬಾರಿ | ಅನುಭವಿ ಚಿನ್ನಪ್ಪ ಮಾವುತ, ಚಂದ್ರ ಕಾವಾಡಿ

- **ಬಿ. ಶೇಖರ್ ಗೋಪಿನಾಥಂ**
- **ಕನ್ನಡಪ್ರಭ ವಾರ್ತೆ** ಮೈಸೂರು

ಜಗತ್ಪ್ರಸಿದ್ಧ ಮೈಸೂರು ದಸರಾ ಜಂಬೂಸವಾರಿಯಲ್ಲಿ ಇದೇ ಮೊದಲ ಬಾರಿಗೆ 750 ಕೆ.ಜಿ. ತೂಕದ ಚಿನ್ನದ ಅಂಬಾರಿ ಹೊರಲು ಪ್ರಶಾಂತ ಆನೆಯು ಸಜ್ಜಾಗಿದೆ.

ಕ್ಯಾಪ್ಟನ್ ಅಭಿಮನ್ಯು ನಂತರ ಅಂಬಾರಿ ಹೊರುವ ಆನೆ ಯಾವುದೆಂಬ ಪ್ರಶ್ನೆಗೆ ಪ್ರಶಾಂತ ಆನೆಯು ಉತ್ತರವಾಗಿದೆ. ಕಾಡಿನಿಂದ ನಾಡಿಗೆ ಬಂದ ಮೇಲೆ ದಸರಾ ಜಂಬೂಸವಾರಿ ತಾಲೀಮಿನಲ್ಲಿ ಪಾಲ್ಗೊಂಡಿದ್ದ ಪ್ರಶಾಂತ ಆನೆಯು, ತನಗೆ ಒದಗಿ ಬಂದ ಅವಕಾಶಗಳಲ್ಲಿ ಸಾಮರ್ಥ್ಯವನ್ನು ಪ್ರದರ್ಶಿಸುವ ಮೂಲಕ ಅಂಬಾರಿ ಹೊರುವ ಜವಾಬ್ದಾರಿಯನ್ನು ಗಿಟ್ಟಿಸಿಕೊಂಡಿದೆ.

ಅಂಬಾರಿ ಹೊರಿಸುವ ಆನೆಗಳ ಪಟ್ಟಿಯಲ್ಲಿ ಪ್ರಮುಖವಾಗಿ ಪ್ರಶಾಂತ, ಧನಂಜಯ ಮತ್ತು ಮಹೇಂದ್ರ ಆನೆಗಳ ಹೆಸರು ಮುಂಚೂಣಿಯಲ್ಲಿತ್ತು. ನಂತರ ಸುಗ್ರೀವ ಮತ್ತು ಏಕಲವ್ಯ ಆನೆಗಳ ಹೆಸರು ಸೇರ್ಪಡೆಯಾಗಿತ್ತು. ಆದರೆ, ತಾಲೀಮು ವೇಳೆ ಮಹೇಂದ್ರ ಆನೆಯು ಮರದ ಅಂಬಾರಿಹೊರಲುಹಿಂದೇಟುಹಾಕಿದ್ದರಿಂದ ಅಂಬಾರಿ ಹೊರುವ ರೇಸ್ ನಿಂದ ತಾನಾಗಿಯೇ ಹೊರ ಬಂದಿತ್ತು. ಹೀಗಾಗಿ ಪಟ್ಟಿಯಲ್ಲಿದ್ದ ಪ್ರಶಾಂತ ಮತ್ತು ಧನಂಜಯ ಆನೆಗಳ ಪೈಕಿ ಪ್ರಶಾಂತ ಆನೆಯು ಅನುಭವ ಹಾಗೂ ವೈಶಿಷ್ಟತೆ ಆಧಾರದ ಮೇರೆಗೆ ಅಂಬಾರಿ ಹೊರಲು ಆಯ್ಕೆಗೊಂಡಿದೆ.

ಪ್ರಶಾಂತ ಆನೆಯು ಕಳೆದ 18 ವರ್ಷಗಳಿಂದ ಮೈಸೂರು ದಸರಾ ಮಹೋತ್ಸವದಲ್ಲಿ ಭಾಗವಹಿಸುತ್ತಿದೆ. ಅರಮನೆಯವಾತಾವರಣ, ಮೆರವಣಿಗೆಯ ಮಾರ್ಗ, ಜನಸಂದಣಿ, ವಾದ್ಯಘೋಷ ಹಾಗೂ ಮಾವುತರ ನಿರ್ದೇಶನಗಳಿಗೆ ಹೊಂದಿಕೊಂಡಿರುವ ಸುದೀರ್ಘ ಅನುಭವ ಹೊಂದಿದೆ.



ಈ ಬಾರಿ ಜಂಬೂಸವಾರಿಯಲ್ಲಿ ಅಂಬಾರಿ ಹೊರಲಿರುವ ಪ್ರಶಾಂತ ಆನೆ.

ಪ್ರಶಾಂತ ಆನೆಯ ಬೆನ್ನಿನ ಮೇಲ್ಭಾಗವು ತುಲನಾತ್ಮಕವಾಗಿ ಸಮತಟ್ಟಾಗಿದ್ದು, ಅಂಬಾರಿಯನ್ನು ಸ್ಥಿರವಾಗಿ ಮತ್ತು ಸಮತೋಲನದಿಂದ ಇರಿಸಲು ಅನುಕೂಲಕರವಾಗಿದೆ.

ದುಬಾರೆಯ ಮೊದಲ ಆನೆ ಪ್ರಶಾಂತ!

ಮೈಸೂರು ದಸರಾ ಮಹೋತ್ಸವದ ಇತಿಹಾಸದಲ್ಲೇ ಮೊದಲ ಬಾರಿಗೆ ದುಬಾರೆ ಆನೆ ಶಿಬಿರದಿಂದ ಆಗಮಿಸಿರುವ ಪ್ರಶಾಂತ ಆನೆಯು ಅಂಬಾರಿ ಹೊರಲಿದೆ. ತಿತಿಮತಿ ಆನೆ ಶಿಬಿರದ ಬಲರಾಮ ಆನೆಯು 14 ಬಾರಿ, ಬಳ್ಳೆ ಆನೆ ಶಿಬಿರದ ಅರ್ಜುನ ಆನೆಯು 8 ಬಾರಿ, ಮತ್ತಿಗೋಡು ಆನೆ ಶಿಬಿರದ ಅಭಿಮನ್ಯು 6 ಬಾರಿ ಅಂಬಾರಿ ಹೊರುವ ಮೂಲಕ ತಮ್ಮ ಪಾರುಪತ್ಯ ಮೆರೆದಿದ್ದವು. ಆದರೆ, ಅತೀ ಹೆಚ್ಚು ಆನೆಗಳು ದಸರಾಗೆ ಬರುತ್ತಿದ್ದ ದುಬಾರೆ ಆನೆ ಶಿಬಿರದ ಆನೆಗಳಿಗೆ ಅಂಬಾರಿ ಹೊರುವ ಅವಕಾಶ ಸಿಕ್ಕಿರಲಿಲ್ಲ. ಇದೇ ಮೊದಲ ಬಾರಿಗೆ ದುಬಾರೆ ಆನೆ ಶಿಬಿರದ ಪ್ರಶಾಂತ ಆನೆಗೆ ಅಂಬಾರಿ ಹೊರುವ ಜವಾಬ್ದಾರಿ ಸಿಕ್ಕಿದೆ.

ಪ್ರಶಾಂತ ಹಿನ್ನೆಲೆ : ಪ್ರಶಾಂತ- 54 ವರ್ಷ, ಶರೀರದ ಎತ್ತರ- 2.61 ಮೀಟರ್, ಶರೀರದ ಉದ್ದ- 3.46 ಮೀಟರ್, ತೂಕ- 5205 ಕೆ.ಜಿ., ದುಬಾರೆ ಆನೆ ಶಿಬಿರ. ಮಾವುತ- ಚಿನ್ನಪ್ಪ, ಕಾವಾಡಿ- ಚಂದ್ರ.

ಪ್ರಶಾಂತ ಆನೆಯನ್ನು 1993ರಲ್ಲಿ ಶಿವಮೊಗ್ಗ ಜಿಲ್ಲೆಯ ಕಾರೇಕೊಪ್ಪ ಅರಣ್ಯ ಪ್ರದೇಶದಲ್ಲಿ ಸೆರೆ ಹಿಡಿಯಲಾಗಿದೆ. ಇದು ಬಲಿಷ್ಠ ಹಾಗೂ ನಂಬಿಕಸ್ಥ ಆನೆಯಾಗಿದ್ದು, ಅರಣ್ಯ ಇಲಾಖೆಯ ವಿವಿಧ ಕಾರ್ಯಾಚರಣೆಗಳಲ್ಲಿ ಪಾಲ್ಗೊಂಡಿದೆ. ಸಮಾರಂಭ ಮೆರವಣಿಗೆಯಲ್ಲಿ ಭಾಗವಹಿಸಿದ ಅನುಭವ ಹೊಂದಿದೆ. 18ನೇ ಬಾರಿಗೆ ದಸರೆಯಲ್ಲಿ ಭಾಗವಹಿಸಿದೆ.

12 ಮಾತ್ರ ಭಾಗಿ, ಧನಂಜಯ ಬರಲ್ಲ

ಈ ಬಾರಿಯ ಜಂಬೂಸವಾರಿಗೆ ಮೀಸಲು ಅಂಬಾರಿ ಆನೆಯಾಗಿ ಆಯ್ಕೆಯಾಗಿರುವ ಧನಂಜಯ ಅರಮನೆ ಆನೆ ಬಿಡಾರದಲ್ಲಿ ಉಳಿಯಲಿದೆ.

ಹೀಗಾಗಿ, ದಸರೆಗೆ ಬಂದಿರುವ 13 ಆನೆಗಳ ಪೈಕಿ 12 ಆನೆಗಳು ಮಾತ್ರ ರಾಜಮಾರ್ಗದಲ್ಲಿ ಸಾಗಲಿವೆ.

ಪ್ರಶಾಂತ ಅಂಬಾರಿ ಹೊರಲಿದ್ದು, ಇದರ ಅಕ್ಕಪಕ್ಕ ಕುಮ್ಕಿಗಳಾಗಿ ಕಾವೇರಿ ಮತ್ತು ರೂಪಾ ಆನೆಗಳು ಸಾಗಲಿವೆ.

ನಿಶಾನೆ ಆನೆ ಗೌರವ ಗಿಟ್ಟಿಸಿಕೊಂಡಿರುವ ಅಭಿಮನ್ಯು ಮೆರವಣಿಗೆ ಆರಂಭದಲ್ಲೇ ತೆರಳಿದ್ದು, ನೌಫತ್ ಆನೆ ಗೋಪಿ ಹಿಂಬಾಲಿಸಲಿದೆ.

ಇದಾದ ಬಳಿಕ ಸಾಲಾನೆಗಳಾಗಿ ಮೊದಲ ತಂಡದಲ್ಲಿ ಮಹೇಂದ್ರ ಮತ್ತು ಲಕ್ಷ್ಮೀ, 2ನೇ ತಂಡದಲ್ಲಿ ಶ್ರೀರಾಮ, ಚೈತ್ರಾ ಮತ್ತು ಸುಗ್ರೀವ ಹಾಗೂ 3ನೇ ತಂಡದಲ್ಲಿ ಶ್ರೀಕಂಠ ಮತ್ತು ಏಕಲವ್ಯ ಹೆಜ್ಜೆ ಹಾಕಲಿವೆ.

ಮೈಸೂರ ದಸರಾ ಅಂಗವಾಗಿ ನಡೆಯುತ್ತಿರುವ ದಸರಾ ಪುಸ್ತಕ ಮೇಳದ ರಿಯಾಯಿತಿ ಮಾರಾಟ ಮೇಳದಲ್ಲಿ ದೇವಿ ಮಹಾತ್ಮೆ ಮೂಡಲಪಾಯ ಯಕ್ಷಗಾನ ಪ್ರಸಂಗವನ್ನು ಎ.ಎಸ್. ತಿಮ್ಮಯ್ಯ ಮತ್ತು ತಂಡದವರು ಪ್ರಸ್ತುತಪಡಿಸಿದರು.

ಸರ್ಕಾರ ಅಂಗವಿಕಲರ ಬೇಡಿಕೆ ಈಡೇರಿಸಲು ಮುಂದಾಗಬೇಕು

ಹುಣಸೂರು: ಸರ್ಕಾರ ಕೂಡಲೇ ಅಂಗವಿಕಲರ ಬೇಡಿಕೆ ಈಡೇರಿಸಲು ಮುಂದಾಗಬೇಕು ಎಂದು ಅಂಬೇಡ್ಕರ್‌ಸ್ವಾಭಿಮಾನಿ ಸೇನೆ ಮೈಸೂರು ಜಿಲ್ಲಾ ಕಾರ್ಯಾಧ್ಯಕ್ಷ ನಾಗೇಶ್ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಅಂಗವಿಕಲರು ಬೆಂಗಳೂರು ಪಾದಯಾತ್ರೆ ಕೈಗೊಂಡಿರುವುದರಿಂದ ಆಡಳಿತ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಶೋಭೆ ತರುವುದಿಲ್ಲ, ಅಂಗವಿಕಲ ಪಾದಯಾತ್ರೆ ಸ್ಥಳಕ್ಕೆ ಮುಖ್ಯಮಂತ್ರಿಗಳು ಭೇಟಿ ನೀಡಿ ಅವರ ಬೇಡಿಕೆ ಈಡೇರಿಸಲು ಮುಂದಾಗಬೇಕು ಎಂದು ಅವರು ತಿಳಿಸಿದ್ದಾರೆ.

ಗೃಹಂ ಹೌಸಿಂಗ್ ಫೈನಾನ್ಸ್ ಲಿಮಿಟೆಡ್
GRIHUM HOUSING FINANCE Apna Ghar. Apni Pehchan.
ನೋಂದಾಯಿತ ಕಛೇರಿ : 6ನೇ ಮಹಡಿ, ಬಿ-ಬಿಲ್ಡಿಂಗ್, ಗಂಗಾ ಟ್ರೊನೋ, ಲೋಹೆಗೋನ್, ಪುಣೆ, ಮಹಾರಾಷ್ಟ್ರ 411014
ಡಿಮಾಂಡ್ ನೋಟೀಸ್ 2002 ರ ಸರ್ಫೇಸಿ ಕಾಯಿದೆ ಕಲಂ 13(2) ರಡಿ

ಕೆಳಕಂಡಂತೆ ತಿಳಿಸಲಾದ ಸಾಲಗಾರರು/ ಸಹ-ಸಾಲಗಾರರು/ ಜಾಮೀನುದಾರರುಗಳಾದ ನೀವುಗಳು ನಿಮ್ಮ ಆಸ್ತಿಗಳನ್ನು ಗೃಹಂ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಭದ್ರತಾ ಸಾಲಿಗರು ಉಲ್ಲೇಖಿಸಿದ ನಂತರ ನೀವು ಗೃಹಸಾಲ/ ಆಸ್ತಿ ಎದುರಾಗಿ ಸೌಲಭ್ಯ(ಗಳ) ಸಾಲವನ್ನು ಪಡೆದಿರುತ್ತೀರಿ. ನೀವು ಮರುಪಾವತಿಯಲ್ಲಿ ಸುಸ್ತಿಯಾಗಿರುವುದರಿಂದ ನಿಮ್ಮ ಸಾಲವನ್ನು ನಿಷ್ಕಾರ್ಯ ಆಸ್ತಿ ಎಂಬುದಾಗಿ ವರ್ಗೀಕರಿಸಲಾಗಿದೆ. 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಕಲಂ 13(2) ರಡಿ ಡಿಮಾಂಡ್ ನೋಟೀಸ್ ಜಾರಿ ಮಾಡಲಾಗಿತ್ತು. ಕೊನೆಯದಾಗಿ ತಿಳಿದುಬಂದ ವಿಳಾಸಗಳಿಗೆ ಕಳುಹಿಸಿ ಬಾಕಿ ವಸೂಲಾತಿ ಮಾಡಿಕೊಳ್ಳುವುದಾಗಿ ತಿಳಿಸಲಾಗಿತ್ತು. ಆದರೆ ಅದು ಬಟವಾಡೆ ಆಗದೆ ಹಿಂತಿರುಗಿ ಬಂದಿದೆ. ಆದುದರಿಂದ ಅದರಲ್ಲಿನ ವಿಷಯವನ್ನು ಹಣಕಾಸು ಆಸ್ತಿಗಳ 2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 3(1) ರೊಂದಿಗೆ ಓದಿಕೊಳ್ಳಬೇಕಾದ ಸದರಿ ಕಾಯಿದೆ 13(2) ರಂತೆ ಈ ಮೂಲಕ ಪ್ರಕಟಿಸಲಾಗಿದೆ ಮತ್ತು ಇದನ್ನು ಪರ್ಯಾಯ ರೀತಿಯಲ್ಲಿ ನಿಮಗೆ ತಿಳಿಸಿದಂತಾಗಿದೆ. ಸಾಲಗಾರರ, ಸಹ-ಸಾಲಗಾರರ, ಜಾಮೀನುದಾರರ, ಭದ್ರತೆಗಳ ವಿವರ, ಬಾಕಿ ಮೊತ್ತ,ಕಾಯಿದೆ 13(2) ರಡಿ ಡಿಮಾಂಡ್ ನೋಟೀಸ್ ನೀಡಲಾಗಿದ್ದು ಮತ್ತು ಕ್ಲೈಮ್ ಮಾಡಲಾಗುವ ಮೊತ್ತವನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಕ್ರ ಸಂ	ಸಾಲಗಾರರ, ಸಹ-ಸಾಲಗಾರರ ಜಾಮೀನುದಾರರ ಹೆಸರು ಮತ್ತು ಸಾಲದ ಮೊತ್ತ	ಅಡಮಾನಿತ ಆಸ್ತಿಯ ವಿವರಣೆ	ಡಿಮಾಂಡ್ ನೋಟೀಸ್ ದಿನಾಂಕ	ಡಿಮಾಂಡ್ ನೋಟೀಸ್‌ನಂತೆ ಮೊತ್ತ (ರೂ)
1	ಶಿವರಾಜು ಎಂ, ಮಂಜುಳ ಎಂ Loan Amount: Rs.2000000/- Loan No: HF0132H21100141	ಸಕಲ ಸಮಸ್ತವೂ ಸೇರಿದಂತೆ ಆಸ್ತಿ ಗುಂಬಳ್ಳಿ ಗ್ರಾಮಪಂಚಾಯತ್ ಆಸ್ತಿ ನಂ. 202 ಮತ್ತು ಫಾರಂ ನಂ. 11 ಬಿ ಯೂನಿಕ್ ನಂ. 150800400500200375, ಉಪ್ಪಿನಮೋಳೆ ಗ್ರಾಮ, ಯಳಂದೂರು ತಾಲೂಕು, ಗುಂಬಳ್ಳಿ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಅಳತೆ ಪೂರ್ವದಿಂದ ಪಶ್ಚಿಮ : 9.144 (13.41) ಮೀಟರ್ಸ್ ಮತ್ತು ಉತ್ತರದಿಂದ ದಕ್ಷಿಣ : 12.192 (10.66) ಮೀಟರ್ಸ್, ಚಕ್ಕುಬಂದಿ : ಒಟ್ಟಾರೆ ಎಲ್ಲಾ ಚರಾಸ್ತಿಗಳು ಮತ್ತು ಸ್ವೀಕೃತಿಯಾಗಬೇಕಾದ ಹಣಗಳು, ಸದರಿ ಆಸ್ತಿಯ ಮೇಲಿರುವ ಎಲ್ಲಾ ಪ್ರಸ್ತುತ ಕಟ್ಟಡಗಳು ಮತ್ತು ನಿರ್ಮಾಣಗಳು ಹಾಗೂ ಸಂಬಂಧಿತ ಅಡಮಾನಗಳ ದಿನಾಂಕದಿಂದ ಅಥವಾ ಆ ನಂತರ ಯಾವುದೇ ಸಮಯದಲ್ಲಿ ಸದರಿ ಆಸ್ತಿಯ ಮೇಲೆ ನಿರ್ಮಿಸಲಾಗುವ ಅಥವಾ ಕಟ್ಟಲಾಗುವ ಎಲ್ಲಾ ಕಟ್ಟಡಗಳು ಮತ್ತು ನಿರ್ಮಾಣಗಳು, ಅವುಗಳಿಗೆ ಮಾಡಲಾಗುವ ಎಲ್ಲಾ ಸೇರ್ಪಡೆಗಳು ಮತ್ತು ಭೂಮಿಗೆ ಜೋಡಿಸಲಾದ ಅಥವಾ ಭೂಮಿಗೆ ಜೋಡಿಸಲಾದ ಯಾವುದೇ ವಸ್ತುವಿಗೆ ಶಾಶ್ವತವಾಗಿ ಅಳವಡಿಸಲಾದ ಎಲ್ಲಾ ಸ್ಥಿರ ಉಪಕರಣಗಳು ಮತ್ತು ಪೀಠೋಪಕರಣಗಳು, ಪ್ರಸ್ತುತ ಮತ್ತು ಭವಿಷ್ಯದಲ್ಲಿ ಇರುವ ಎಲ್ಲವೂ ಸಹ ಒಳಗೊಂಡಿರುತ್ತವೆ ಮತ್ತು ಚಕ್ಕುಬಂದಿ : ಪೂರ್ವಕ್ಕೆ : ರಾಜಮ್ಮ ರವರ ಮನೆ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ರಂಗಸ್ವಾಮಿ ರವರ ಮನೆ.	10/10/2026	ರೂ. 1955602/- (ಹತ್ತೊಂಭತ್ತು ಲಕ್ಷದ ಐವತ್ತೈದು ಸಾವಿರದ ಆರುನೂರಾ ಎರಡು ರೂ ಮಾತ್ರ) ಜೊತೆಗೆ ತದನಂತರದ ವಾರ್ಷಿಕ @ 15.45% ಬಡ್ಡಿ ಯೊಂದಿಗೆ ಮರು ಪಾವತಿಯವರೆಗೆ.
2	ಪುಟ್ಟರಾಜು, ಎಸ್ ಮಣಿ Loan Amount: Rs.1000000/- Loan No: HL00588 000000005010404	ಸಕಲ ಸಮಸ್ತವೂ ಸೇರಿದಂತೆ ಆಸ್ತಿ ಸಂತೆಮಾರನಹಳ್ಳಿ ಗ್ರಾಮಪಂಚಾಯತ್ ಆಸ್ತಿ ನಂ. 1783 ಮತ್ತು ಫಾರಂ ನಂ. 9 ಮತ್ತು 11 ಎ ರಂತೆ ಯೂನಿಕ್ ನಂ. 150800103800401704 ಸಂತೆಮಾರನಹಳ್ಳಿ ಗ್ರಾಮ, ಚಾಮರಾಜನಗರ ತಾಲೂಕು ಜೊತೆಗೆ ಸಂತೆಮಾರನಹಳ್ಳಿ ಗ್ರಾಮಪಂಚಾಯತ್ ಆಡಳಿತವ್ಯಾಪ್ತಿ ಅಳತೆ ಪೂರ್ವದಿಂದ ಪಶ್ಚಿಮ : 5.334 ಮೀಟರ್ಸ್ ಮತ್ತು ಉತ್ತರದಿಂದ ದಕ್ಷಿಣ : 8.229 ಮೀಟರ್ಸ್, ಚಕ್ಕುಬಂದಿ : ಪೂರ್ವಕ್ಕೆ : ಬೀದಿ, ಪಶ್ಚಿಮಕ್ಕೆ : ರಾಜಮ್ಮ ರವರ ಮನೆ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಸಿದ್ದರಾಜು ರವರ ಮನೆ ಮತ್ತು ನಿವೇಶನ	10/10/2026	ರೂ. 1095519/- (ಹತ್ತು ಲಕ್ಷದ ತೊಂಭತ್ತೈದು ಸಾವಿರದ ಐದುನೂರಾ ಹತ್ತೊಂಭತ್ತು ರೂ ಮಾತ್ರ) ಜೊತೆಗೆ ತದನಂತರದ ವಾರ್ಷಿಕ @ 12.7% ಬಡ್ಡಿ ಯೊಂದಿಗೆ ಮರು ಪಾವತಿಯವರೆಗೆ.
3	ಮಹಮದ್ ಘನಿ, ಹಸೀನಾ ಬಾನು ಎಂ, ಸಾಲದ ಮೊತ್ತ: ರೂ.5000000/ಇದರಲ್ಲಿ ರೂ.1800000/ಸೇರಿದೆ. LAP05882000000005064225 ಹೊಂದಿರುವ ಸಾಲ ಖಾತೆ ಮತ್ತು ರೂ.3200000/- ಹೊಂದಿರುವ ಸಾಲ ಖಾತೆ HL00588100000005031625 ಹೊಂದಿರುವ ಸಾಲ ಖಾತೆ ನೋಡಿ.	ಸಕಲ ಸಮಸ್ತವೂ ಸೇರಿದಂತೆ ನಿವೇಶನ ನಂ. 19, ಅಲೈನೇಟೆಡ್ ಭೂಮಿ ಸರ್ವೆ ನಂ. 48/1 ಅಳತೆ 1 ಎಕರೆ 30 ಗುಂಟೆಗಳು, ದೇವನೂರು ಗ್ರಾಮ, ಕಸಬ ಹೋಬಳಿ, ಮೈಸೂರು ತಾಲೂಕು, ಅಳತೆ ಪೂರ್ವದಿಂದ ಪಶ್ಚಿಮ : 45 ಅಡಿ ಮತ್ತು ಉತ್ತರದಿಂದ ದಕ್ಷಿಣ : 20 ಅಡಿ, ಚಕ್ಕುಬಂದಿ : ಪೂರ್ವಕ್ಕೆ : ನಿವೇಶನ ನಂ. 16, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ನಿವೇಶನ ನಂ. 20, ದಕ್ಷಿಣಕ್ಕೆ : ನಿವೇಶನ ನಂ. 18.	10/10/2026	ಸಾಲ ಸಂಖ್ಯೆ: LAP05882 00000005064225 ರೂ.1881918/- (ಹದಿನೆಂಟು ಲಕ್ಷ ಎಂಬತ್ತು ಒಂದು ಸಾವಿರದ ಒಂಬತ್ತು ನೂರ ಹದಿನೆಂಟು ಮಾತ್ರ) ಮರುಪಾವತಿಯವರೆಗೆ ವಾರ್ಷಿಕ @ 15.35% ಹೆಚ್ಚಿನ ಬಡ್ಡಿಯೊಂದಿಗೆ. ಸಾಲ ಸಂಖ್ಯೆ: HL00588100000005031625, ರೂ. 3193786 /- (ಮೂವತ್ತೊಂದು ಲಕ್ಷದ ತೊಂಬತ್ತಮೂರು ಸಾವಿರದ ಏಳು ನೂರ ಎಂಬತ್ತಾರು ಮಾತ್ರ) ಮರುಪಾವತಿಯವರೆಗೆ ವಾರ್ಷಿಕ @ 12.7% ಹೆಚ್ಚಿನ ಬಡ್ಡಿಯೊಂದಿಗೆ.

ಸಾಲಗಾರ/ರ ಮತ್ತು ಸಹ-ಸಾಲಗಾರ/ರ, ಜಾಮೀನುದಾರರುಗಳಾದ ನಿಮ್ಮಗಳಿಗೆ ಕರೆ ನೀಡುವುದೇನೆಂದರೆ, ಡಿಮಾಂಡ್ ನೋಟೀಸ್‌ನಲ್ಲಿರುವ ಮೊತ್ತ ಜೊತೆಗೆ ಮೇಲೆ ತಿಳಿಸಿದಂತೆ ಬಡ್ಡಿಯನ್ನು ಪೂರ್ತಿಯಾಗಿ ಈ ನೋಟೀಸ್ ನೀಡಿದ 60 ದಿನಗಳ ಒಳಗಾಗಿ ಪಾವತಿ ಮಾಡಬೇಕು. ವಿಫಲರಾದಲ್ಲಿ ಕೆಳಸಹಿದಾರರು ಮೇಲೆ ತಿಳಿಸಿದ ಭದ್ರತೆ/ಗಳ ಮೇಲೆ ಕ್ರಮವನ್ನು ಕಾಯಿದೆ ಪ್ರಕಾರ ಕೈಗೊಳ್ಳುತ್ತಾರೆ. ನೀವು ಗಮನಿಸಬೇಕಾದುದೇನೆಂದರೆ ಸದರಿ ಕಾಯಿದೆ ಕಲಂ 13(13) ರಂತೆ ಉಲ್ಲೇಖಿಸಲಾದ ಭದ್ರತೆಗಳನ್ನು ಮಾರಾಟ, ಲೀಸ್ ಅಥವಾ ಇತರೆ ರೀತಿಯಲ್ಲಿ ನಮ್ಮ ಒಪ್ಪಿಗೆ ಇಲ್ಲದೆ ಪರಭಾರೆ ಮಾಡದಂತೆ ನಿಮ್ಮನ್ನು ಪ್ರತಿಬಂಧಿಸಲಾಗಿದೆ.
ಸೂಚನೆ ಸ್ಥಳೀಯ ಭಾಷಾ ಪ್ರಕಟಣೆ ಮತ್ತು ಇಂಗ್ಲೀಷ್ ವೃತ್ತಪತ್ರಿಕೆ ಪ್ರಕಟಣೆಯ ವಿಷಯಗಳ ನಡುವೆ ಯಾವುದೇ ವ್ಯತ್ಯಾಸವಿದ್ದರೆ, ವ್ಯವಹಾರದ ಮಾನದಂಡದಲ್ಲಿ ಪ್ರಕಟವಾದ ಇಂಗ್ಲೀಷ್ ವೃತ್ತಪತ್ರಿಕೆಯ ಭಾಷೆಯ ವಿಷಯವು ಮಾನ್ಯವಾಗಿರುತ್ತದೆ.

ಸ್ಥಳ : ಮೈಸೂರು
ದಿನಾಂಕ : 20.10.2026
ಸಹಿ/- ಅಧಿಕೃತ ಅಧಿಕಾರಿ,
ಗೃಹಂ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ಮೈಸೂರಿನ ಪುರಭವನದಲ್ಲಿ ವಿಶ್ವವಿಖ್ಯಾತ ದಸರಾ ಮಹೋತ್ಸವದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಶ್ರೀ ಕಾಲಭೈರವೇಶ್ವರ ಕೃಪಾಪೋಷಿತ ನಾಟಕ ಮಂಡಳಿ ವತಿಯಿಂದ ದಕ್ಷ ಯಜ್ಞ ಅಥವಾ ಚಂದ್ರಮನ ಶಾಪ ವಿಮೋಚನೆ ಪೌರಾಣಿಕ ನಾಟಕವನ್ನು ಡಾ.ಬಿ.ಆರ್. ಅಂಬೇಡ್ಕರ್‌ಅಭಿವೃದ್ಧಿ ನಿಗಮದ ಅಧ್ಯಕ್ಷ ಸಿ. ನರೇಂದ್ರ ಉದ್ಘಾಟಿಸಿದರು. ಎಪಿಎನ್ ಪ್ರಾಪರ್ಟೀಸ್ ವ್ಯವಸ್ಥಾಪಕ ನಿರ್ದೇಶಕ ಎ.ಪಿ. ನಾಗೇಶ್, ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ, ಮುಳ್ಳೂರು ದೇವರಾಜ್, ಹರೀಶ್ ರೆಡ್ಡಿ, ಸಿದ್ಧಾರ್ಥ್ ಕಮರಳ್ಳಿ, ಸಂತೋಷ್, ಚಂದ್ರಶೇಖರ್, ರಂಗಭೂಮಿ ಕಲಾವಿದ ಹುಯಿಲಾಳು ರಾಜು ಇದ್ದರು.

AFFIDAVIT
I, **MOHAMMED HUSSAIN** S/o Abdul Khuddus, resident of D.No: 238, Thriveni Nagar, T Narasipura, Byrapura, Mysore District, Pin: 571124, Karnataka, India, hereby declare that, my correct name is **MOHAMMED HUSSAIN** Whereas in Passport Document (No.M 2520262) mentioned as **MOHAMED HUSSAIN** which is incorrect, Hereafter my name is known as **MOHAMMED HUSSAIN**. Hence I am searing this affidavit before Notary Leelavathi.S, Mysuru. Dated: 25-08-2026

ಬಜಾಜ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್
BAJAJ HOUSING FINANCE
ಕಾರ್ಪೋರೇಟ್ ಕಚೇರಿ: ಸೆರೆಬ್ರಮ್, ಐಟಿ ಪಾರ್ಕ್, ಬಿ2 ಕಟ್ಟಡ, 5ನೇ ಮಹಡಿ, ಕುಮಾರ್ ಸಿಟಿ, ಕಲ್ಯಾಣಿ ನಗರ್, ಪುಣೆ, ಮಹಾರಾಷ್ಟ್ರ- 411014, ಶಾಖಾ ಕಚೇರಿ: 2ನೇ ಮಹಡಿ, ಎಸ್‌ಆರ್‌ಎಸ್ ಮಾನ್ಷನ್, #21, 6ನೇ ಮೈನ್, ಕಾಮಾಕ್ಷಿ ಹಾಸ್ಪಿಟಲ್ ರಸ್ತೆ, ಸರಸ್ವತಿಪುರಂ, ಮೈಸೂರು- 570017

ಸ್ವಾಧೀನ ಸೂಚನೆ
2002ರ ಹಣಕಾಸು ಆಸ್ತಿಗಳ ಭದ್ರತೆ ಹಾಗೂ ಪುನರ್ ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ಕಾಯಿದೆ ಕಲಂ ಯು/ಎಸ್13(4)ರಡಿ,
2002ರ ಭದ್ರತಾ ಹಿತಾಸಕ್ತಿ ಜಾರಿ ನಿಯಮಗಳ ನಿಯಮ 8-(1) (ಅಪೆಂಡಿಕ್ಸ್-IV)

ಆದಾಗ್ಯೂ, ಮೆ॥ ಬಜಾಜ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (ಬಿಹೆಚ್‌ಎಫ್‌ಎಲ್)ನ ಅಧಿಕೃತ ಅಧಿಕಾರಿಯಾಗಿ ಮತ್ತು 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 3ರ ಜೊತೆಗೆ ಓದಿಕೊಳ್ಳಬೇಕಾದ ಕಲಂ 13(2) ರಡಿ ಪ್ರದತ್ತವಾದ ಅಧಿಕಾರಗಳಂತೆ ಕೆಳಕಂಡಂತೆ ತಿಳಿಸಲಾದ ಸಾಲಗಾರರು/ಸಹ-ಸಾಲಗಾರರು/ಜಾಮೀನುದಾರ(ರು)ಗಳಿಗೆ ಡಿಮಾಂಡ್ ನೋಟೀಸ್(ಗಳು) ಜಾರಿಮಾಡಿ ಸದರಿ ನೋಟೀಸ್ ಸ್ವೀಕರಿಸಿದ 60 ದಿನಗಳ ಒಳಗಾಗಿ ನೋಟೀಸ್‌ನಲ್ಲಿ ನಮೂದಿಸಲಾದ ಮೊತ್ತವನ್ನು ಮರುಪಾವತಿ ಮಾಡಲು ಸೂಚಿಸಿದ್ದರು. ಸಾಲಗಾರ(ರು) ಸಹ-ಸಾಲಗಾರ(ರು) ಜಾಮೀನುದಾರ(ರು)ಗಳಿಗೆ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಸೂಚನೆ (ನೋಟಿಸ್) ನೀಡುವುದೇನೆಂದರೇ ಮೆ॥ ಬಜಾಜ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಪರವಾಗಿ ಕೆಳಸಹಿದಾರರು ಅವರಿಗೆ ಸದರಿ ನಿಯಮಗಳ ನಿಯಮ 8-(1)ರೊಡನೆ ಓದಿಕೊಳ್ಳಬೇಕಾದ ಕಾಯಿದೆಯ ಕಲಂ 13(4)ರಡಿ ಪ್ರದತ್ತವಾದ ಅಧಿಕಾರಗಳಂತೆ ಕೆಳಕಂಡಂತೆ ವಿವರಿಸಲಾದ ಆಸ್ತಿಗಳ **ಸ್ವಾಧೀನತೆಯನ್ನು ಪಡೆದುಕೊಂಡಿರುತ್ತಾರೆ.** ಸಾಲಗಾರ(ರು) ಸಹ-ಸಾಲಗಾರ(ರು) ಜಾಮೀನುದಾರ(ರು)ಗಳಿಗ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಎಚ್ಚರಿಕೆ ನೀಡುವುದೇನೆಂದರೇ ಸದರಿ ಆಸ್ತಿಯೊಡನೆ ಯಾರೂ ಯಾರ ಜೊತೆಗೂ ವ್ಯವಹರಿಸಬಾರದು ವ್ಯವಹರಿಸಿದ್ದೇ ಆದರೆ ಆಸ್ತಿಯ ಫಸ್ಟ್ ಚಾರ್ಜ್ ಬಿಹೆಚ್‌ಎಫ್‌ಎಲ್‌ಗೆ ಬಾಕಿಯಾಗಿರುವ ಕೆಳಕಂಡಂತೆ ವಿವರಿಸಲಾದ ಮೊಬಲಗು(ಗಳಿಗೆ) ಮತ್ತು ತದನಂತರದ ಬಡ್ಡಿ ಸೇರಿದ ಮೊತ್ತಕ್ಕೆ ಭಾದ್ಯರಾಗಬೇಕಾಗುತ್ತದೆ.

ಸಾಲಗಾರ(ರು)/ ಜಾಮೀನುದಾರ(ರು) ಹೆಸರು (LAN ಸಂ. ಶಾಖೆಯ ಹೆಸರು)	ಭದ್ರತಾ ಆಸ್ತಿಯ ವಿವರ (ಸ್ಥಿರಾಸ್ತಿ)	ಡಿಮಾಂಡ್ ನೋಟೀಸ್ ದಿನಾಂಕ ಮತ್ತು ಮೊತ್ತ	ಸ್ವಾಧೀನತೆಯ ದಿನಾಂಕ
ಶಾಖೆ: ಮಂಡ್ಯ, LAN:4J2RMS95804111, 1. ರಂಗಸ್ವಾಮಿ ಡಿ (ಸಾಲಗಾರರು), ಪಂಚಾಯತ್ ಖಾತಾ ಸಂ. 152200700805220004, ಹಳೇ ಖಾತಾ ಸಂ. 385/250, ಬಿ. ಬೆಟ್ಟಹಳ್ಳಿ ಗ್ರಾಮ, ಟಿ. ನರಸೀಪುರ, ಬನ್ನೂರು, ಮೈಸೂರು ಜಿಲ್ಲೆ, ಕರ್ನಾಟಕ- 571101. 2. ಮೀನ ಬಿಸಿ (ಸಹ- ಸಾಲಗಾರರು), 1 ಮತ್ತು 2 ಇಬ್ಬರ ವಿಳಾಸ: ಬಿ ಬೆಟ್ಟಹಳ್ಳಿ, ಬನ್ನೂರು ಹೋಬಳಿ, ಟಿ ನರಸೀಪುರ ತಾಲ್ಲೂಕು, ಅತ್ತಹಳ್ಳಿ, ಬನ್ನೂರು ಅಂಚೆ, ಮೈಸೂರು, ಕರ್ನಾಟಕ- 571101.	**ಷೆಡ್ಯೂಲ್ ಆಸ್ತಿ:** ಸಕಲ ಸಮಸ್ತವೂ ಸೇರಿದಂತೆ ಕೃಷಿಯೇತರ ಆಸ್ತಿಯ ವಿವರ: ಮನೆಯ ಆಸ್ತಿಯ ಪಂಚಾಯತ್ ಖಾತಾ ಸಂ. 152200700805220004, ಹಳೇ ಖಾತಾ ಸಂ. 385/250, ಅಳತೆ: ಪೂರ್ವದಿಂದ ಪಶ್ಚಿಮಕ್ಕೆ ★ ಉತ್ತರದಿಂದ ದಕ್ಷಿಣಕ್ಕೆ: 16.45 X 14.93 ಮೀಟರ್, ನಿರ್ಮಿತ ಪ್ರದೇಶದಲ್ಲಿನ ಮನೆ 168.43 ಚ.ಮೀ. ಆರ್‌ಆರ್‌ಸಿ ಜೊತೆಗೆ ಛಾವಣಿ ಮತ್ತು ಪ್ಲಾಟ್ ಅಳತೆ- 102.47 ಚ.ಮೀ. ಬಿ. ಬೆಟ್ಟಹಳ್ಳಿ ಗ್ರಾಮ, ಟಿ. ನರಸೀಪುರ, ಬನ್ನೂರು, ಮೈಸೂರು ಜಿಲ್ಲೆ, ಕರ್ನಾಟಕ- 571101, **ಪೂರ್ವಕ್ಕೆ:** ಸುಂಕರಯ್ಯ ರವರಖಾಲಿ ಪ್ಲಾಟ್, **ಪಶ್ಚಿಮಕ್ಕೆ:** ರಸ್ತೆ, **ಉತ್ತರಕ್ಕೆ:** ದಾಸೇಗೌಡ ರವರ ಮನೆ, **ದಕ್ಷಿಣಕ್ಕೆ:** ಗ್ರಾಮ ನಿಲ್ದಾಣದ ರಸ್ತೆ.	31ನೇ ಜುಲೈ 2026 ರೂ. 4,52,349/- (ನಾಲ್ಕು ಲಕ್ಷದ ಐವತ್ತೆರಡು ಸಾವಿರದ ಮುನ್ನೂರ ನಲವತ್ತೊಂಭತ್ತು ರೂ. ಗಳು ಮಾತ್ರ)	16- ಅಕ್ಟೋಬರ್- 26

ಸಾಂಕೇತಿಕ ಸ್ವಾಧೀನತೆಯ ದಿನಾಂಕ: 16-ಅಕ್ಟೋಬರ್-26, ಸ್ಥಳ: ಮೈಸೂರು
ಸಹಿ/- ಅಧಿಕೃತ ಅಧಿಕಾರಿ, ಬಜಾಜ್ ಹೌಸಿಂಗ್ ಫೈನಾನ್ಸ್‌ಲಿಮಿಟೆಡ್

ಕುಡಿದು ಗಲಾಟೆ ಮಾಡಿ ವ್ಯಕ್ತಿಯ ಹತ್ಯೆ: ಆರೋಪಿ ಬಂಧನ

ಮೈಸೂರು: ಬಾರ್‌ವೊಂದರಲ್ಲಿ ಕುಡಿದ ಗಲಾಟೆ ಮಾಡಿಕೊಂಡ ವ್ಯಕ್ತಿಯೊಬ್ಬನನ್ನು ಹಲ್ಲೆ ನಡೆಸಿ ಕೊಲೆ ಮಾಡಿರುವ ಘಟನೆ ಮೈಸೂರಿನ ವಿದ್ಯಾರಣ್ಯಪುರಂನಲ್ಲಿ ನಡೆದಿದೆ. ಕೊಲೆ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಅಶೋಕಪುರಂ ನಿವಾಸಿ ಮಹೇಶ್ (46) ಎಂಬವರೇ ಕೊಲೆಯಾದವರು. ಇವರ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಿದ ಆರೋಪಿ ಅಶೋಕಪುರಂ ನಿವಾಸಿ ನಂದೀಶ್ (40) ಎಂಬಾತನನ್ನು ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಈ ಇಬ್ಬರು ಭಾನುವಾರ ಮಧ್ಯಾಹ್ನ ಬಾರ್‌ವೊಂದರಲ್ಲಿ ಮದ್ಯ ಸೇವಿಸುತ್ತಿದ್ದರು, ದೆ. ಈ ವೇಳೆ ಮಹೇಶ್ ಮೇಲೆ ನಂದೀಶ್ ಹಲ್ಲೆ ನಡೆಸಿದ್ದಾರೆ. ಬಾರ್‌ನಿಂದ ಹೊರ ಬಂದ ಮಹೇಶ್ ವಿದ್ಯಾರಣ್ಯಪುರಂ 4ನೇ ಕ್ರಾಸ್ ನಲ್ಲಿ ಹೋಗುತ್ತಿದ್ದಾಗ ಹಿಂಬಾಲಿಸಿಕೊಂಡು ಬಂದ ನಂದೀಶ್ ಮತ್ತೆ ಕ್ಯಾತೆ ತೆಗೆದು ಹಲ್ಲೆ ನಡೆಸಿದ್ದಾರೆ. ಈ ಸಂಬಂಧ ವಿದ್ಯಾರಣ್ಯಪುರಂ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕನ್ನಡಪ್ರಭ
ಪ್ರತಿ ಶುಕ್ರವಾರ ಸಿನಿಮಾ ಸುದ್ದಿಗಳ ಪುರವಣಿ ಚಿತ್ರಪ್ರಭ
SANDALWOOD ☆ TOLLYWOOD ☆ KOLLYWOOD ☆ MOLLYWOOD ☆ BOLLYWOOD ☆ HOLLYWOOD
ಚಿತ್ರಪ್ರಭ

ಮೈಸೂರು ಅರಮನೆ ಮುಂಭಾಗದಲ್ಲಿ ದಸರಾ ಜಂಬೂಸವಾರಿಗೆ ಆಸನಗಳ ಸಿದ್ಧತೆ.

ಮೈಸೂರಿನ ಬಂಡಿಪಾಳ್ಯದ ಎಪಿಎಂಸಿ ಆವರಣದಲ್ಲಿ ದಸರಾ ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲಿರುವ ಸ್ತಬ್ಧಚಿತ್ರಗಳ ಅಂತಿಮ ಹಂತದ ಸಿದ್ಧತೆಯು ಭರದಿಂದ ಸಾಗುತ್ತಿರುವುದು.

ಎಕ್ಸಿಸ್ ಬ್ಯಾಂಕ್
ರೀಟೈಲ್ ಲೆಂಡಿಂಗ್ & ಪೇಮೆಂಟ್ ಗ್ರೂಪ್ (ದಕ್ಷಿಣ ವಲಯ ಕಛೇರಿ/ಶಾಖೆ): ಎಕ್ಸಿಸ್ ಬ್ಯಾಂಕ್ ಲಿಮಿಟೆಡ್, #45 ಪ್ರೆಸ್ಟೀಜ್ ಲಿಬ್ರಾ, 1ನೇ ಮಹಡಿ, ಪ್ರಾದೇಶಿಕ ಪಾಸ್‌ಪೋರ್ಟ್ ಕಚೇರಿ, ಉರ್ವಶಿ ಥಿಯೇಟರ್ ಹತ್ತಿರ, ಲಾಲ್‌ಬಾಗ್ ರಸ್ತೆ, ಲಾಲ್‌ಬಾಗ್, ಬೆಂಗಳೂರು-560027.
ಎಕ್ಸಿಸ್ ಬ್ಯಾಂಕ್ ಲಿ., 3ನೇ ಮಹಡಿ, ಗಿಗಪ್ಲೆಕ್ಸ್, ಎನ್‌ಪಿಸಿ-1, ಟಿಟಿಸಿ ಇಂಡಸ್ಟ್ರಿಯಲ್ ಪ್ರದೇಶ್, ಮುಗಲಸನ್ ರಸ್ತೆ, ಐರೋಲಿ, ನವಿ, ಮುಂಬೈ-400708, ನೋಂದಾಯಿತ ಕಛೇರಿ: "ತ್ರಿಶೂಲ್" 3ನೇ ಮಹಡಿ, ಸಮರ್ಥೇಶ್ವರ ದೇವಸ್ಥಾನದ ಎದುರು, ಲಾ ಗಾರ್ಡನ್, ಎಲಿಸ್‌ಬ್ರಿಡ್ಜ್, ಅಹಮದಾಬಾದ್-380006.

ಸ್ಥಿರಾಸ್ತಿಯ ಮಾರಾಟಕ್ಕಾಗಿ ಇ-ಹರಾಜು ಮಾರಾಟದ ಸೂಚನೆ
ಸೆಕ್ಯುರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು ಸೆಕ್ಯುರಿಟಿ (ಎನ್‌ಫೋರ್ಸ್‌ಮೆಂಟ್) (ಅಮೆಂಡ್‌ಮೆಂಟ್) ನಿಯಮಗಳು 2002ರ ನಿಯಮ 8(6) & 9(1) ರ ನಿಬಂಧನೆಗಳನ್ನು ಓದಿಕೊಂಡಂತೆ ಇದರ ಅನ್ವಯ ಸ್ಥಿರಾಸ್ತಿಯ ಹರಾಜು ಮಾರಾಟ ಸೂಚನೆ

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಈ ಕೆಳಗೆ ವಿವರಿಸಿರುವ ಸೆಕ್ಯೂರ್ಡ್ ಕ್ರೆಡಿಟರ್‌ರವರಿಗೆ ಅಡಮಾನ/ಚಾರ್ಜ್ ಮಾಡಿರುವ ಸ್ಥಿರಾಸ್ತಿಯನ್ನು ಎಕ್ಸಿಸ್ ಬ್ಯಾಂಕ್/ಸೆಕ್ಯೂರ್ಡ್ ಕ್ರೆಡಿಟರ್ ಇವರ ಅಧಿಕೃತ ಅಧಿಕಾರಿಯವರು ಭೌತಿಕವಾಗಿ ಸ್ವಾಧೀನಕ್ಕೆ ಪಡೆದುಕೊಂಡಿದ್ದು ಅವುಗಳನ್ನು **"ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಎಲ್ಲಿ ಏನಿದೆಯೋ ಹಾಗೆ"** ಆಧಾರದ ಮೇಲೆ ಸೆಕ್ಯೂರ್ಡ್ ಕ್ರೆಡಿಟರ್ ಆದ **ಎಕ್ಸಿಸ್ ಬ್ಯಾಂಕ್** ಇವರಿಗೆ **ಸಾಲಗಾರರು: (1) ಶ್ರೀ.ಅಬ್ದುಲ್ ರಹೇಮಾನ್ ಎಫ್** ಬಿನ್ ಫೈಜುಲ್ಲಾ # 359/1, ಸಿ ಬ್ಲಾಕ್, ಘೌಸಿಯಾ ನಗರ, ತಖ್ವಾ ಮಸೀದಿ ಹತ್ತಿರ, ಉದಯಗಿರಿ, ಮೈಸೂರು-570019 **ಮತ್ತೊಂದು ವಿಳಾಸ : ಶ್ರೀ.ಅಬ್ದುಲ್ ರಹೇಮಾನ್ ಎಫ್** ಬಿನ್ ಫೈಜುಲ್ಲಾ, ಮಾಲೀಕರು : ಎಲ್‌ಐಜಿ 2, ಶಟ್ಟಳ್ಳಿ ರಾಜ್‌ಕುಮಾರ್ ರಸ್ತೆ, ಇಂದಿರಾ ಕ್ಯಾಂಟೀನ್ ಹತ್ತಿರ, ಮೈಸೂರು-570019 **(ಸಾಲಗಾರರು/ಅರ್ಜಿದಾರರು), (2) ಶ್ರೀಮತಿ. ಮೊಸಿನಾ ತಾಜ್** ಕೋಂ ಅಬ್ದುಲ್ ರಹೇಮಾನ್, # 359/1, ಸಿ ಬ್ಲಾಕ್, ಘೌಸಿಯಾ ನಗರ, ತಖ್ವಾ ಮಸೀದಿ ಹತ್ತಿರ, ಉದಯಗಿರಿ, ಮೈಸೂರು-570019 **(ಸಹ-ಅರ್ಜಿದಾರರು/ಜಾಮೀನುದಾರರು) ಖಾತೆ ಉಲ್ಲೇಖ ಸಂಖ್ಯೆ: 6415,** ಇವರಿಂದ ಬರಬೇಕಾದ ಬಾಕಿ ಮೊತ್ತ **ರೂ. 31,79,137/- (ರೂಪಾಯಿ ಮೂವತ್ತೊಂದು ಲಕ್ಷದ ಎಪ್ಪತ್ತೊಂಭತ್ತು ಸಾವಿರದ ಒಂದುನೂರ ಮೂವತ್ತೇಳು ಮಾತ್ರ) ದಿನಾಂಕ: 01.03.2026 ರಂತೆ ಬಾಕಿ ಇರುವ ಮೊತ್ತ (ಈ ಮೊತ್ತವು 01.03.2026 ರವರೆಗೆ ಅನ್ವಯಿಸಲಾದ ಬಡ್ಡಿಯನ್ನು ಒಳಗೊಂಡಿದೆ)** ಇದ್ದಂತೆ ಬಡ್ಡಿ + ಖರ್ಚು, ವೆಚ್ಚ ಇತ್ಯಾದಿಗಳ ವಸೂಲಿಗಾಗಿ ಅಡಮಾನು ಮಾಡಿರುವ ಸ್ಥಿರಾಸ್ತಿಯನ್ನು **ದಿನಾಂಕ: 12.11.2026** ರಂದು ಇ-ಹರಾಜು ಮಾರಾಟ ಮಾಡಲಾಗುತ್ತಿದೆ. ಮೀಸಲು ಬೆಲೆ, ಮುಂಗಡ ಠೇವಣಿ ಮತ್ತು ಬಿಡ್ ಗುಣಾಂಕದ ವಿವರಗಳು ಈ ಕೆಳಗಿನಂತಿವೆ.

ಎನ್ಕಂಬರೆನ್ಸ್ (ಏನಾದರು ಇದ್ದಲ್ಲಿ)	ಇಲ್ಲ
ಮೀಸಲು ಬೆಲೆ (ರೂ.ಗಳಲ್ಲಿ)	ರೂ.23,58,250/- (ರೂಪಾಯಿ ಇಪ್ಪತ್ತಮೂರು ಲಕ್ಷದ ಐವತ್ತೆಂಟು ಸಾವಿರದ ಇನ್ನೂರ ಐವತ್ತು ಮಾತ್ರ)
ಅರ್ನೆಸ್ಟ್ ಹಣದ ಠೇವಣಿ (ಇ.ಎಂ.ಡಿ) (ರೂ.ಗಳಲ್ಲಿ)	ರೂ.2,35,825/- (ರೂಪಾಯಿ ಎರಡು ಲಕ್ಷದ ಮೂವತ್ತೈದು ಸಾವಿರದ ಎಂಟುನೂರ ಇಪ್ಪತ್ತೈದು ಮಾತ್ರ) ಡಿಡಿ/ಪಿಓ ಮೂಲಕ 'ಎಕ್ಸಿಸ್ ಬ್ಯಾಂಕ್ ಲಿಮಿಟೆಡ್' ಪರವಾಗಿ, ಬೆಂಗಳೂರಿನಲ್ಲಿ ಪಾವತಿಸಬೇಕು.
ಬಿಡ್ ಹೆಚ್ಚಳ ಮೊತ್ತ	ರೂ. 25,000/- (ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ)
ಬಿಡ್/ಇಎಂಡಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	11.11.2026 ಸಂಜೆ 5.00 ಗಂಟೆಯೊಳಗೆ. ವಿಳಾಸ : ಎಕ್ಸಿಸ್ ಬ್ಯಾಂಕ್ ಲಿಮಿಟೆಡ್, #45, ಪ್ರೆಸ್ಟೀಜ್ ಲಿಬ್ರಾ, 1ನೇ ಮಹಡಿ, ಪ್ರಾದೇಶಿಕ ಪಾಸ್‌ಪೋರ್ಟ್ ಕಛೇರಿ, ಊರ್ವಶಿ ಥಿಯೇಟರ್ ಹತ್ತಿರ, ಲಾಲ್‌ಬಾಗ್ ರಸ್ತೆ ಲಾಲ್‌ಬಾಗ್ ಬೆಂಗಳೂರು, ಕರ್ನಾಟಕ-560027. addressed to ಶ್ರೀ.ರಘುನಾಥ್
ಸಾರ್ವಜನಿಕ ಹರಾಜಿಗೆ ದಿನಾಂಕ, ಸಮಯ ಮತ್ತು ಸ್ಥಳ	12.11.2026 ರಂದು, ವೆಬ್ ಪೋರ್ಟಲ್ https://www.bankeauctions.com ನಲ್ಲಿ 5 ನಿಮಿಷಗಳ ಅನಿಯಮಿತ ವಿಸ್ತರಣೆಗಳೊಂದಿಗೆ 11.00 ಬೆಳಗ್ಗೆ ಮತ್ತು 12.00 ಮಧ್ಯಾಹ್ನ. ಇ-ಹರಾಜು ಬಿಡ್ ಫಾರ್ಮ್, ಘೋಷಣೆ ಇತ್ಯಾದಿಗಳನ್ನು ಒಳಗೊಂಡಿರುವ ಇ-ಹರಾಜು ಟೆಂಡರ್ ದಾಖಲೆಗಳು, ಮೇಲೆ ತಿಳಿಸಿದಂತೆ ಸೇವಾ ಪೂರೈಕೆದಾರರ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಅಡಮಾನ ಆಸ್ತಿಯ ವಿವರ: ಷೆಡ್ಯೂಲ್ :ಆಸ್ತಿ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಭೂಮಿಯ ಹೆಚ್ ನಂ. 202 ಇಡಬ್ಲ್ಯೂಎಸ್-2, 1ನೇ ಫೇಸ್, ಕ್ಯಾತಮಾರನಹಳ್ಳಿ ಬಡಾವಣೆ, ನಜರ್‌ಬಾದ್ ಮೊಹಲ್ಲಾ, ಮೈಸೂರು-570010, ಕರ್ನಾಟಕ, ಜೊತೆಗೆ ಭೂಮಿಗೆ ಜೋಡಿಸಲಾದ ಅಥವಾ ಪ್ರಸ್ತುತ ಮತ್ತು ಭವಿಷ್ಯದ ಯಾವುದೇ ವಸ್ತುಗಳಿಗೆ ಶಾಶ್ವತವಾಗಿ ಜೋಡಿಸಲಾದ ಎಲ್ಲಾ ಕಟ್ಟಡಗಳು ಮತ್ತು ರಚನೆಗಳು, ನೆಲೆವಸ್ತುಗಳು, ಫಿಟ್ಟಿಂಗ್‌ಗಳು ಮತ್ತು ಎಲ್ಲಾ ಸ್ಥಾವರ ಮತ್ತು ಯಂತ್ರೋಪಕರಣಗಳನ್ನೊಳಗೊಂಡಿರುತ್ತದೆ ಮತ್ತು ಚಕ್ಕುಬಂದಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಸ್ವತ್ತಿನ ನಂ. 234, ಉತ್ತರಕ್ಕೆ : ಸ್ವತ್ತಿನ ನಂ. 203, ದಕ್ಷಿಣಕ್ಕೆ : ಸ್ವತ್ತಿನ ನಂ. 239.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ಭದ್ರತಾ ಸಾಲದಾತರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ನೋಡಿ ಅಂದರೆ https://www.axisbank.com/auction-retail ಮತ್ತು ಬ್ಯಾಂಕ್‌ನ ಅನುಮೋದಿತ ಸೇವಾ ಪೂರೈಕೆದಾರ M/s Shriram Auto mall India Limited (AUGEO) ಅವರ ವೆಬ್ ಪೋರ್ಟಲ್ https://augeo.samil.in/home ಹರಾಜನ್ನು ಬ್ಯಾಂಕಿನ ಅನುಮೋದಿತ ಸೇವಾ ಪೂರೈಕೆದಾರರಾದ M/s Shriram Auto mall India Limited (AUGEO) ಅವರ ವೆಬ್ ಪೋರ್ಟಲ್ https://augeo.samil.in/home ಮೂಲಕ ಆನ್‌ಲೈನ್‌ನಲ್ಲಿ ನಡೆಸಲಾಗುತ್ತದೆ. ಯಾವುದೇ ಇತರ ಸಹಾಯಕ್ಕಾಗಿ, ಬಿಡ್‌ದಾರರು ಬೆಳಿಗ್ಗೆ 9:30 ರಿಂದ ಸಂಜೆ 4:00 ರವರೆಗೆ ಕಚೇರಿ ಸಮಯದಲ್ಲಿ ಬ್ಯಾಂಕಿನ ಅಧಿಕೃತ ಅಧಿಕಾರಿ ಶ್ರೀ **ರಘುನಾಥ್ ಮೊಬೈಲ್ ಸಂಖ್ಯೆ: 9886960484** ಮತ್ತು **ಶ್ರೀ. ಗುರು ಬಿ ಜಿ, ಮೊಬೈಲ್ ಸಂಖ್ಯೆ: 9741872497** ಅವರನ್ನು ಸಂಪರ್ಕಿಸಬಹುದು.
ಭದ್ರತಾ ಹಿತಾಸಕ್ತಿ (ಜಾರಿ) (ತಿದ್ದುಪಡಿ) ನಿಯಮಗಳು, 2002 ರ ನಿಯಮ 8(6) & 9(1) ರಡಿಯಲ್ಲಿ ಸಾಲಗಾರರು/ ಸಹ-ಸಾಲಗಾರರು/ಜಾಮೀನುದಾರರಿಗೆ ಈ ಸೂಚನೆಯನ್ನು 15 ದಿನಗಳ ಸೂಚನೆ ಎಂದು ಪರಿಗಣಿಸಬೇಕು.

ದಿನಾಂಕ : 19.10.2026
ಸ್ಥಳ: ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ,
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್.

बैंक ऑफ़ बड़ौदा Bank of Baroda
ಬ್ಯಾಂಕ್ ಆಫ್ ಬರೋಡ
ಪ್ರಾದೇಶಿಕ ಕಛೇರಿ, ಬರೋಡಾ ಸೌಧ, ವಿಶ್ವಮಾನವ ಡಬಲ್ ರೋಡ್, ಸರಸ್ವತಿಪುರಂ, ಮೈಸೂರು

ಸಂಕ್ಷಿಪ್ತ ವಾಹನ ಇ-ಹರಾಜಿನ ಸೂಚನೆ

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ/ ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಹೈಪೋಥೆಕೇಶನ್/ಸಾಲ ಒಪ್ಪಂದದ ಅಡಿಯಲ್ಲಿ ಪಕ್ಷಗಳು ಕಾರ್ಯಗತಗೊಳಿಸಿದ ಅಧಿಕಾರಗಳನ್ನು ಬಳಸಿಕೊಂಡು ಬ್ಯಾಂಕ್ ಕೆಳಗೆ ತಿಳಿಸಲಾದ ಹೈಪೋಥೆಕೇಟೆಡ್ ಮೋಟಾರು ವಾಹನವನ್ನು ಮರು ಸ್ವಾಧೀನಪಡಿಸಿಕೊಂಡಿದೆ/ ವಶಪಡಿಸಿಕೊಂಡಿದೆ ಮತ್ತು ಕೆಳಗೆ ತಿಳಿಸಲಾದ ಖಾತೆಗಳಲ್ಲಿ ಬಾಕಿಗಳನ್ನು ವಸೂಲಿ ಮಾಡಲು ವಾಹನವನ್ನು ಸ್ವಾಧೀನಕ್ಕೆ ಪಡೆದುಕೊಂಡಿದ್ದು, **"ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ"** ಮಾರಾಟ ಮಾಡಲಾಗುವುದು. ಸಾಲಗಾರರ / ಜಾಮೀನುದಾರರ /ಅಡಮಾನದಾರರ ಆಸ್ತಿಯ ವಿವರ / ಬಾಕಿ ಮೊತ್ತ / ಮೀಸಲು ಬೆಲೆ / ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

ಕ್ರ ಸಂ	ಸಾಲಗಾರರ / ಜಾಮೀನುದಾರರ ಹೆಸರು & ವಿಳಾಸ	ವಾಹನ ತಯಾರಿಕೆ & ಮಾದರಿ ಆರ್ ಟಿ ಓ ನೊಂದಾಯಿತ ನಂ. Baanknet ಆಸ್ತಿ ಐಡಿ & ಹರಾಜು ಐಡಿ	ಒಟ್ಟು ಬಾಕಿ ಮೊತ್ತ	ಇ-ಹರಾಜಿನ ದಿನಾಂಕ ಮತ್ತು ಸಮಯ	ಬಿಡ್ ಸಲ್ಲಿಸುವ ಕೊನೆಯ ದಿನಾಂಕ & ಸಮಯ	1) ಮೀಸಲು ಬೆಲೆ, 2) ಇಎಂಡಿ, 3) ಬಿಡ್ ಗುಣಾಂಕ ಮೊತ್ತ,	ಇಎಂಡಿ ಠೇವಣಿ ಖಾತ ನಂ., ಐಎಫ್‌ಎಸ್‌ಸಿ ಕೋಡ್, ಬ್ಯಾಂಕ್ ಆಫ್ ಬರೋಡಾ ಶಾಖೆಯ ಹೆಸರು	ವಾಹನ/ಚಲಿಸಬಲ್ಲ ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ.
1	ನಂದಿನಿ ಬಿ ಕೋಂ ಸುಧೀಂದ್ರ ಭಾರದ್ವಾಜ್, ಡೋರ್ ನಂ.1168, 4ನೇ ಮೇನ್, 10ನೇ ಕ್ರಾಸ್, ಇ ಮತ್ತು ಎಫ್ ಬ್ಲಾಕ್, ರೂಬಿ ಬೇಕರಿ ಹತ್ತಿರ, ರಾಮಕೃಷ್ಣನಗರ ಮೈಸೂರು -570022.	TOYOTA KIRLOSKAR MOTOR PVT LTD URBAN CRUISER HYRYDER V HYBRID KA09MK3972 BARB3972 & 376252	ರೂ. 22,52,954.33 ಜೊತೆಗೆ ಭವಿಷ್ಯದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು.	07.11.2026 ರಂದು ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯ ವರೆಗೆ	07.11.2026 ಸಂಜೆ 6.00 ಗಂಟೆಯವರೆಗೆ	1) ಮೀಸಲು ಬೆಲೆ: ರೂ.20,52,000/- 2) ಇಎಂಡಿ ಮೊತ್ತ: ರೂ.2,05,200/- 3) ಬಿಡ್ ಗುಣಾಂಕದ ಮೊತ್ತ ರೂ.10,000/-	73780015181869 BARB0VJINSU ಬ್ಯಾಂಕ್ ಆಫ್ ಬರೋಡಾ ಇಂಡಸ್ಟ್ರಿಯಲ್ ಸಬ್‌ಅರ್ಬ್ ಶಾಖೆ	ದಿನಾಂಕ 06.11.2026 ರಂದು ಸಂಜೆ 4.00 ಗಂಟೆಯವರೆಗೆ
2	ನಾಗರತ್ನ C/o ಲೇಟ್ ಪಿ ದಿನೇಶ, ನಂ.259/ಎ, ಎನ್‌ಆರ್ ಮೊಹಲ್ಲಾದ ಈಶಾನ್ಯ, ಶಂಕರ್ ನರ್ಸಿಂಗ್ ಹೋಮ್ ಹತ್ತಿರ, ಎನ್ ಆರ್ ಮೊಹಲ್ಲಾ, ಮೈಸೂರು.	TATA CURV TATA MOTORS KA09MK7635 BARB7635 & 376250	ರೂ. 15,04,324.65 ಜೊತೆಗೆ ಭವಿಷ್ಯದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು.	07.11.2026 ರಂದು ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯ ವರೆಗೆ	07.11.2026 ಸಂಜೆ 6.00 ಗಂಟೆಯವರೆಗೆ	1) ಮೀಸಲು ಬೆಲೆ: ರೂ.14,54,000/- 2) ಇಎಂಡಿ ಮೊತ್ತ: ರೂ.1,45,400/- 3) ಬಿಡ್ ಗುಣಾಂಕದ ಮೊತ್ತ ರೂ.10,000/-	73820015181869 BARB0VJJLBR ಬ್ಯಾಂಕ್ ಆಫ್ ಬರೋಡಾ ಜೆಎಲ್‌ಬಿ ರಸ್ತೆ ಶಾಖೆ	ದಿನಾಂಕ 06.11.2026 ರಂದು ಸಂಜೆ 4.00 ಗಂಟೆಯವರೆಗೆ
3	ಮೆ. ವೈಷ್ಣವಿ ಲಾಜಿಸ್ಟಿಕ್, ಮಾಲೀಕರು: ರಮ್ಯ ಬಿ.ಎಸ್, ನಂ.470/1, ಬಿ ಬ್ಲಾಕ್, ಎಪಿಎಂಸಿ ಯಾರ್ಡ್, ಬಂಡಿಪಾಳ್ಯ, ಮೈಸೂರು-570025.	EICHER PRO 2095XP K RVAN BSVI KA 09 AA 3549 BARB3549 & 376274	ರೂ. 43,08,557.70 ಜೊತೆಗೆ ಭವಿಷ್ಯದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು.	07.11.2026 ರಂದು ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯ ವರೆಗೆ	07.11.2026 ಸಂಜೆ 6.00 ಗಂಟೆಯವರೆಗೆ	1) ಮೀಸಲು ಬೆಲೆ: ರೂ.17,34,000/- 2) ಇಎಂಡಿ ಮೊತ್ತ: ರೂ.17,34,000/- 3) ಬಿಡ್ ಗುಣಾಂಕದ ಮೊತ್ತ ರೂ.10,000/-	79140015181869 BARB0VJJPMY ಬ್ಯಾಂಕ್ ಆಫ್ ಬರೋಡಾ ಜೆ ಪಿ ನಗರ ಶಾಖೆ	ದಿನಾಂಕ 06.11.2026 ರಂದು ಸಂಜೆ 4.00 ಗಂಟೆಯವರೆಗೆ

* ವಾಹನ ಸಂಖ್ಯೆ 1 & ವಾಹನ ಸಂಖ್ಯೆ 2ನ್ನು ಎಸ್ ಎಂಪಿ ಯಾರ್ಡ್, ಸಂಖ್ಯೆ 83/3ಆ, ವಿಸ್ತಾರ 1/31, ಸರ್ಕಾರಿ ಉತ್ತನಹಳ್ಳಿ, ಪೆಟ್ರೋಲ್ ಬಂಕ್ ಎದುರು, ಭಾನವಿ ಅರಮನೆಯ ಹಿಂದೆ, ರಿಂಗ್ ರಸ್ತೆ, ಮೈಸೂರು -28ರಲ್ಲಿ ಇರಿಸಲಾಗುತ್ತದೆ. * ವಾಹನ ಸಂಖ್ಯೆ 3 ಅನ್ನು ಬೆಂಗಳೂರಿನ ನೆಲಮಂಗಲದಲ್ಲಿರುವ ಮೆ॥ ರೂಬಿ ಎಂಟರ್‌ಪ್ರೈಸ್ ಅವರ ವಶಪಡಿಸಿಕೊಳ್ಳುವ ಪ್ರಾಂಗಣದಲ್ಲಿ ಇರಿಸಲಾಗಿದೆ.
ನಿಯಮಗಳು ಮತ್ತು ನಿಬಂಧನೆಗಳು: (1) ಇ-ಹರಾಜನ್ನು **"ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ"** ಆಧಾರದ ಮೇಲೆ ನಡೆಸಲಾಗುತ್ತಿದೆ ಮತ್ತು **https://baanknet.com** ನಲ್ಲಿ "ಆನ್‌ಲೈನ್" ಮೂಲಕ ನಡೆಸಲಾಗುವುದು. (2) ಮೇಲೆ ತಿಳಿಸಿದಂತೆ ಅದೇ ದಿನ ಅಥವಾ ಮುಂದಿನ ಕೆಲಸದ ದಿನದಂದು ಬಿಡ್ ಮೊತ್ತದ 25% (ಇಎಂಡಿ ಕಡಿಮೆ) ಮತ್ತು/ಅಥವಾ 15 ದಿನಗಳ ಒಳಗೆ ಬಾಕಿ ಬಿಡ್ ಮೊತ್ತದ 75% ಪಾವತಿಸಲು ವಿಫಲವಾದರೆ ಮಾರಾಟವು ಯಾವುದೇ ಸೂಚನೆ ಇಲ್ಲದೆ ಸ್ವಯಂಚಾಲಿತವಾಗಿ ರದ್ದತಿಯಾಗುತ್ತದೆ. ಯಶಸ್ವಿ ಬಿಡ್ದಾರರು ಪಾವತಿಸಿದ ಇಎಂಡಿ ಮತ್ತು ಯಾವುದೇ ಇತರ ಹಣವನ್ನು ಅಧಿಕೃತ ಅಧಿಕಾರಿಯು ಬ್ಯಾಂಕಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಹೆಚ್ಚಿನ ವಿವರಗಳಿಗಾಗಿ ಯಾವುದೇ ನಿರೀಕ್ಷಿತ ಬಿಡ್ದಾರರು ಅಧಿಕೃತ ಅಧಿಕಾರಿಯನ್ನು ದೂರವಾಣಿ ಸಂಖ್ಯೆ 08212571909, ಇಮೇಲ್ ಐಡಿ : **recovery.mysuru@bankofbaroda.com** ನಲ್ಲಿ ಸಂಪರ್ಕಿಸಬಹುದು.
ಗಮನಿಸಿ: ಬಿಡ್ಡುದಾರರು ಮಾರಾಟದ ಮೊತ್ತದ ಜೊತೆಗೆ ಅನ್ವಯವಾಗುವ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ)ಯನ್ನು ಬ್ಯಾಂಕಿಗೆ ಪಾವತಿಸಬೇಕಾಗುವುದು.

ದಿನಾಂಕ : 19.10.2026
ಸ್ಥಳ : ಮೈಸೂರು
ಸಹಿ/ ಅಧಿಕೃತ ಅಧಿಕಾರಿ,
ಬ್ಯಾಂಕ್ ಆಫ್ ಬರೋಡ